ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಆರ್ಜೀ ನಂಬರ್ 30.

ಮೃತಪಟ್ಟ ಕರೇಗೌಡರ ಆಸ್ತೀ ವಿಷಯದಲ್ಲಿ.

ಆರ್ಜೀದಾರು) 1ನೇ ಜವರೇಗೌಡ, 2ನೇ ಜವನ, 3ನೇ ಕಳಸಾ, 4ನೇ ನಂಜಾ 2–3–4ನೇ ಮೈನರ್ ಗಾರ್ಡಿಯರ್ 1ನೇ ಆರ್ಜಿದಾರ ಜವರೇಗೌಡ ಮೃತಪಟ್ಟ ಸದರೀ ಕರೇಗೌಡರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರದ ತಾಲ್ಲೂಕು ಕಸಬಾ ಹೋಬಳಿ ಹಟ್ಟುವನ್ನೀ ಸ್ಥಳದ ಸದರಿ ಜವರೇಗೌಡರು ಸದರಿ ವಾಸಸ್ಥರಾಗಿ ಮೃತಪಟ್ಟ ಕರೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜವರೇಗೌಡರ ಅರ್ಜಿಯನ್ನು 1889ನೇ ಇಸವಿ ಮಾರ್ಚ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಆರ್ಜೀ ನಂಬರ್ 33.

ಮೃತಪಟ್ಟ ಗುರುಮೂರ್ತಿಜೋಯಿಸರ ಆಸ್ತೀ ವಿಷಯದಲ್ಲಿ—

ಆರ್ಜೀದಾರು) ತಿಪ್ಪಯ್ಯನವರು, ಮೃತಪಟ್ಟ ಸದರೀ ಗುರುಮೂರ್ತಿಜೋಯಿಸರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡ್ಲು ನರಸೀಪುರದ ತಾಲ್ಲೂಕು ತಿರುಮಕೂಡ್ಲು ಸ್ಥಳದ ಸದರಿ ತಿಪ್ಪಯ್ಯನವರು ಸದರಿ ವಾಸಸ್ಥರಾಗಿ ಮೃತಪಟ್ಟ ಗುರುಮೂರ್ತಿಜೋಯಿಸರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಿಪ್ಪಯ್ಯನವರ ಅರ್ಜೀಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರುಮೂರ್ತಿಜೋಯಿಸರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇಧೆ.

1889ನೇ ಇಸವಿ ಆರ್ಜೀ ನಂಬರ್ 43.

ಮೃತಪಟ್ಟ ನಾರಾಯಣಶೆಂಗರ ಆಸ್ತೀ ವಿಷಯದಲ್ಲಿ–

ಆರ್ಜೀದಾರಳು ಕಾವೇರಿಬಾಯಮ್ಮನವರು, ಮೃತಪಟ್ಟ ಸದರೀ ನಾರಾಯಣಶೆಂಗರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ದೇವರಾಜಮೊಹಲಾ ಸ್ಥಳದ ಸದರಿ ಕಾವೇರಿಬಾಯಮ್ಮನವರು ಸದರಿ ವಾಸಸ್ಥರಾಗಿ ಮೃತಪಟ್ಟ ನಾರಾಯಣಶೆಂಗರ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಕಾವೇರಿಬಾಯ್ಯಮ್ಮನವರ ಅರ್ಜೀಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ಹಾಸನದ ಪೊಕ್ಕಾಮಿನಲ್ಲಿ ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಾಯಣಶೆಂಗರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಫಿಬ್ರವರಿ 16ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ವಸ್ತ ಖತ್ತೊಡನೆ ಕೊಡೋಣಾಗಿಧೆ.

ಎಸ್. ಜೀವಾಜಿರಾವ್,

ಡಿಸ್ಟ್ರಿಕ್ಟ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟು ಸೆಶನ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೀದಾರಳು ಮೈಸೂರು ದೇವರಾಜ ಮೊಹಲ್ಲಾದಲ್ಲಿರುವ ಜಯನಾಬೀ ಯಂಬವಳ ವಿಷಯದಲ್ಲಿ—

ಸ್ನ 1888ನೇ ಇಸವಿ ದಿವಾಳೀ ಕೇಸ್ ನಂಬರು 366.

ಹುಕುಂ.

ವೇಲ್ಲಂಡ ಜಯನಾಬೀ ಯಂಬವಳು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಆರ್ಜೀ ಅಂಶವು ಈ ಕೋರ್ಟು ರೂಬರೂ ಆರ್ಜೀದಾರಳಾದ ಜಯನಾಬಿಯು ಖುದ್ದುಹಾಜರು. ಮತ್ತು ಸದರೀ ಯವಳ ಲೇಣೀದಾರ್‌ರಾದ 1ನೇ ಫಾತ್ಮಾಬಿ 2ನೇ ಫಾತ್ಮಾಟಿ 3ನೇ ಹಯಾತ್‌ಬಿ 5ನೇ ಹಯಾತ್‌ಸಾಬಿ 7ನೇ ಮಹಮ್ಮದಿಹುಸೇ ಯಿವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಪ್ತ್ಗೆ ನೋಟಿಸ್ ಜಾರೀಮಾಡ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—4ನೇ ಮುಮ್ಮತ್ತು ಸಾಬಿ 6ನೇ ಬೀರನಾಬಿ

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಜಯನಾಬೀ ಹೊಂದುವದಕ್ಕೆ ಹಕ್ಕುದಾರ ಳಾಗುವದರ ಮೂಲಕ ದಿವಾಳೀಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತೆ ಯಾಗಿ ಸದರೀ ದಿವಾಳೀಯಾದವಳನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಕ್ಷಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿರಾಲಸ್ ಮಾಡಲಾಗಿರುತ್ತೆ ಯೆಂದು ಯಿದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಕ್ 1889ನೇ ಇಸವಿ ಫಿಬ್ರವರಿ 6ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತಿನೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗದೇಪ್ಪೆ ಜಂಟಿದದ್ದು	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಮೈಸೂರು ದೇವರಾಜಮೊಹಲಾದಲ್ಲಿರುವ ಘನತ್ಯಾಬಿ ವಗೈರೆ 6 ಜನ	84 5 8		ಡಿಕ್ರೀ ಬಾಬತು	

ದಿವಾಳೀಯಾದ ಡಿಕ್ರೀದೇಣೀದಾರ ಶ್ರೀನಿವಾಸಮೂರ್ತಿಯು ವಿಷಯದಲ್ಲಿ—

ಸ್ಕ್ 1888ನೇ ಇಸವಿ ದಿವಾಳೀ ಕೇಸ್ ನಂಬರು 204.

ಹುಕುಂ.

ಮೇಲ್ಕಂಡ ಶ್ರೀನಿವಾಸಮೂರ್ತಿ ಯಂಬವನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ಈ ಕೋರ್ಟು ರೂಬರೂ ಅರ್ಜೆದಾರನಾದ ಶ್ರೀನಿವಾಸಮೂರ್ತಿಯು ಖುದ್ದುಹಾಜರು, ಮತ್ತು ಸದರೀಯವನ ಲೇಣೇದಾರ್ರಾದ 2ನೇ ಪುಟ್ಟಣ್ಣಯ್ಯ 3ನೇ ತಿಮ್ಮಂಮ 5ನೇ ಬೋರಾ 6ನೇ ಕುಂಟಿ 8ನೇ ಚನ್ನಾ 9ನೇ ಯೇಜಂಟ್‌ಬಾಳಾಜಿರಾವು ಇವರಿಗೂ ದರ್ಯಾಪ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಪ್ತ್ಗೆ ನೋಟಿಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—1ನೇ ನರಸಿಂಭಟ್ಟ 4ನೇ ನಂಜಡಿಗೌಡ 7ನೇ ಅಪ್ಪಾಚಾರಿ 10ನೇಯೇಜಂಟ್ ಅಳಸಿಂಗ್ರಾಚಾರ್ 11ನೇ ರಾಘವೆಂದ್ರರಾವು 12ನೇ ಆಲೂರಯ್ಯ.

ಸಿವಿಲ್ ಪ್ರೊಸೀಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಶ್ರೀನಿವಾಸಮೂರ್ತಿ ಯಂಬವನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆ ಯಾಗಿ ಸದರಿ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಕ್ಷಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿರಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಕ್ 1889ನೇ ಇಸವಿ ಜನವರಿ 16ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತಿನೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೀ ಜಂಟಿದದ್ದು	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
2	ಕೋಣೂರು ಪುಟ್ಟಣಯ್ಯ ..	157 0 0		ಭೋಗ್ಯ ದಸ್ತೈವಜು ಬಾಬತು	
6	ಡಿಟೋ ವೂರು ಕುಂಟಾ ..	125 0 0		ಡಿಟೋ	
5	ಡಿಟೋ ವೂರು ಬೋರಾ ..	125 0 0		ಡಿಟೋ	
8	ಡಿಟೋ ವೂರು ಚನ್ನಾ ..	50 0 0		ಡಿಟೋ	
9	ಮೈಸೂರು ಬ್ಯಾಂಕ್ ಯೇಜಂಟ್ ಬಾಳಾಜಿರಾವ್	540 0 0 160 0 2		ಡಿಟೋ	
10	ಮೈಸೂರು ಸಂಪತ್‌ಕುಮಾರ ಬ್ಯಾಂಕ್ ಅಳಸಿಂಗ್ರಾಚಾರ್	83 0 0		ಡಿಕ್ರೀ ಬಾಬತು	
	ಜುಮ್ಲ ..	700 0 2			

ದಿವಾಳಿಯಾದ ಡಿಕ್ರೀ ದೇಣೀದಾರ ಬೆಂಗಳೂರು ಕಬ್ಬರಸಾಬರ ಪ್ಯಾಟೇಲಿರತಕ್ಕ ಇನ್ಯಾಕಯ್ಯನ ವಿಷಯದಲ್ಲಿ—

ಸ್ರ 1888ನೇ ಇಸವಿ ದಿವಾಳಿ ಕೇಸ್ ನಂಬರ್ 975.

ಹುಕುಂ.

ಮೇಲ್ಕಂಡ ಇನ್ಯಾಕಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್‌ರಾದ ವೆ|| ಸಿ. ಕೈನೆ ಸಾಹೆಬರವರ ರೂಬರೂ ಅರ್ಜೀದಾರನಾದ ಇನ್ಯಾಕಯ್ಯನ್ನ ಖುದ್ದಾಗಿಯೂ ಮತ್ತು ಸದರೀಯವನ ಲೇಣೀದಾರ್ರಾದ 1–2–3ನೇ ಯವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಯಲ್ಲರೂ ಹಾಜರು.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಇನ್ಯಾಕಯ್ಯನು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ 1889ನೇ ಇಸವಿ ಜನವರಿ 21ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮದಸ್ತಖತ್‌ನಿಶಿ ಕೊಡಲ್ಪಟ್ಟಿತು.

ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1889ನೇ ಇಸವಿ ಫಿಬ್ರವರಿ 6ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು	ಲೇಣೀದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ	ಸಾಲದ ಮೊತ್ತ	ಯಾವ ಸಾಲಕ್ಕೋಸ್ಕರ ದಸ್ತಗಿರೀ ಮಾಡಲ್ಪಟ್ಟಿದ್ದರೆ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ	ಷರಾ
1	ಮೈಸೂರು ಟ್ರೇಡ್ ಬ್ಯಾಂಕ್ ಯೇಜಂಟ್-ರಾವು ರಾನು	72 3 6		ಡಿಕ್ರಿ ಬಾಬತ್ತು	

ಸಿ. ಶ್ರೀನಿವಾಸಯ್ಯಂಗಾರ್ಯ,
ಸಬ್ ಜಡ್ಜ.

ಹಾಸನ ಡಿಸ್ಟ್ರಿಕ್ಟ್.

ತಾರೀಖು 16ನೇ ಫಿಬ್ರವರಿ 1889.

ಯಿಬರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ವೆ|| ದಿವಾನ್ ಸಾಹೆಬರವರ ಹುಕುಂ ಬವೋಜಿಬ್ ಹಾಸನ ಡಿಸ್ಟ್ರಿಕ್ಟಿನ ಪೈಕಿ ಮಂಜರಾಬಾದು ತಾಲ್ಲೂಕಿಲ್ಲಿ ಇರುವ ಮಾರನಹಳ್ಳಿ ಘಾಟಿಯಲ್ಲಿ ಟೋಲ್‌ಗೇಟ್ ಯೆಂಬ ಸುಂಕದ ಕಟ್ಟಿ ವಳಗೆ ಸ್ರ 1889ನೇ ಇಸವಿ ಏಪ್ರೆಲ್ ಮಾಹೆ 1ನೇ ಮುರ್ತು ಲಾಗಾಯತು 1890ನೇ ಇಸವಿ ಮಾರ್ಚಿ 31ರವರಿಗೆ ಸುಂಕ ವಸೂಲ್‌ಮಾಡುವ ಸ್ವೀತಂತ್ರ್ಯವು 1889ನೇ ಇಸವಿ ಮಾರ್ಚಿ ತಾರೀಖು 27ರಲ್ಲಿ ಸಕಲೇಶಪುರದ ಮೊಕ್ಕಾಮಿನಲ್ಲಿ ತಾಲ್ಲೂಕು ಕಛ್ಚೇರಿವಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲೀ ಹಕ್ಕನ್ನ ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಾಗಿರುವ ಪೆಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೇನೇ ಟೋಲ್ ವಸೂಲ್ಮಾಡಬೇಕು. ಮತ್ತು ಸ್ರ 1876ನೇ ಇಸವಿ ನವಂಬರ್4ನೇ ಮುರ್ತು 274ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷ್ನರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಘಾಯಿಷಾಗಿರುವ ರೂಲ್‌ಸ್‌ಗಳಿಗನುಸಾರ ನಡಕೊಳ್ಳಬೇಕು.

3. ಚಪದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸ್ನ ಡಿಸ್ಟ್ರಿಕ್ಟು ಆಫಿಸರವರು ಅಧಿಕಾರ ವೊಳಿಸಿಕೊಂಡಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ 4ರಲ್ಲಿ ಒಂದು ಅಂಕ ಮೊಬಲಗನ್ನ ಅಡ್ವನಸಾಗಿ ತೇವಣಿಯಿಟ್ಟು ಬಾಕಿ ಮೊಬಲಗನ್ನ 1889ನೇ ಇಸವಿ ಏಪ್ರೆಲ್ 20ರ ಲಾಗಾಯತು ಸಮನಾದ 6 ಖಿಸ್ತು ಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತಿ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಲಾಯಿಬಾದಲು ಬ್ಯಾನನ್ನ ಜಾಮೀನಾ ಕೊಡಬೇಕು. ಸದರೀ ಜಾಮೀನಾ ದಸ್ತೈವಜು ಕ್ರಮವಾಗಿ ರಿಜಿಸ್ಟರು ಮಾಡಿಸಿ ಹಾಜರ್ ಪಡಿಸಬೇಕು.